# ಹತ್ತನೇ ತರಗತಿ ಅರ್ಧ ವಾರ್ಷಿಕ ಪ್ರಶ್ನೆ ಪತ್ರಿಕೆ – ೨೦೧೯–೨೦

ದ್ವಿತೀಯ ಭಾಷೆ ಕನ್ನಡ | ಸಮಯ – ೨.೩೦ ಗಂ | ಅಂಕಗಳು – ೮೦

**I** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. ೧*೪=೪

೧. ರೂಢನಾಮಕ್ಕೆ ಉದಾಹರಣೆಯಾದ ಪದವಿದು

ಎ) ಇಂದ್ರ ಬಿ) ಕಾಶಿ ಸಿ) ಥೇಮ್ಸ ಡಿ) ಜಿಂಕೆ

೨. ಕೃತಜ್ಞತೆ ಇದರ ವಿರುದ್ಧ ರೂಪವಿದು.

ಎ) ಉಪಕಾರ ಬಿ) ಕೃಪೆ ಸಿ) ಕೃತಘ್ನತೆ ಡಿ) ಕೃತಾರ್ಥ

೩. ಗುಲಾಮ ಪದದ ಅರ್ಥ

ಎ) ಮಾಲಿಕ ಬಿ) ಅಧಿಕಾರಿ ಸಿ) ನಾಯಕ ಡಿ) ಅಡಿಯಾಳು

೪. ಜೋಡುನುಡಿಗೆ ಉದಾಹರಣೆಯಾದ ಪದ

ಎ) ಬೇಗ ಬೇಗ ಬಿ) ಕೇಳು ಕೇಳು ಸಿ) ಕ್ರಿಮಿ ಕೀಟ ಡಿ) ಮೊಟ್ಟಮೊದಲು

**II** ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧೨*೧=೧೨

೫. ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು ?

೬. ಶ್ರೇಷ್ಠ ಗುರುವಿನಲ್ಲಿ ಎಂಥಹ ಶಕ್ತಿ ಇರುತ್ತದೆ ?

೭. ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?

೮. ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ ?

೯. ಸಸ್ತನಿಗಳ ಆಶ್ರಯದಾಣಗಳು ಯಾವುವು ?

೧೦. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು ?

೧೧. ಏಣಿ ಜನರಿಗೆ ಮಾಡಿದ ಉಪಕಾರವೇನು ?

೧೨. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ ?

೧೩. ಚೈತ್ರದಲ್ಲಿ ಯಾವುದರ ಕೆಲಸ ನಡೆದಿರುತ್ತದೆ ?

೧೪. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?

೧೫. ತಿಮಿರಕ್ಕೆ ವೈರಿ ಯಾವುದು ?

೧೬. ಕವಿ ಸಿ.ಪಿ.ಕೆ.ಯವರು ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಹೇಳಿದ್ದಾರೆ ?

**III** ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೮*೨=೧೬

೧೭. ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?

೧೮. ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು ?

೧೯. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ ?

೨೦. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?

೨೧. ಮೇಲೇರಿದವನಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ ?

೨೨. ಸದ್ದು ಮಾಡದೆ ಬದುಕಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳು ಯಾವುವು ?

೨೩. ವೈದ್ಯರು ಬೀಮನಾಯಕನ ಮಗನ ಪ್ರಾಣವನ್ನು ಉಳಿಸಿದ ಬಗೆ ಹೇಗೆ ?

೨೪. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು ?

**IV** ಕೆಳಗಿನ ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಪರಿಚಯ ಬರೆಯಿರಿ.

೨೫. ಅ.ರಾ.ಮಿತ್ರ ೧*೩=೩

**V** ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. ೧*೩=೩

೨೬. ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು
ದೀಪದೆದುರಿಗೆ ತಿಮಿರ ಸರಿಯುವಂತೆ
ಶಾಂತಿಯಲಿ ಬದುಕಿನೀ ಕರ್ತವ್ಯವವನು ಮುಗಿಸು;
ಕೂಗಾಡಿ, ಹಾರಾಡಿ ಫಲವದೇನು ?

VI. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ ಬರೆಯಿರಿ. ೧*೩=೩

೨೭. ಸೀತೆಯ ಮುಖಕಮಲ ಅರಳಿತು

VII ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರು ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. ೧*೩=೩

೨೮. ಪೆನ್ನು ಖಡ್ಗಕ್ಕಿಂತ ಹರಿತವಾದುದು.

ಅಥವಾ

ಹಾಸಿಗೆ ಇದ್ದಷ್ಟು ಕಾಲು ಚಾಚು

VIII ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ.

೨೯. ಅದರ ಈಗಿನ ಆವಸ್ಥೆಯನ್ನು ನಾನು ನೋಡಲಾರೆ.

೩೦. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು.

೩೧. ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ.

೩೨. ಇವರಿಗೆ ಭಾರ ಹೊತ್ತವರ ಕಾಳಜಿಯೇ ಇಲ್ಲ.

೩೩. ಕಾಡುತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು.

IX ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. ೧*೪=೪

೩೪. ಕೊರಡ ಕೊನರಿಸಿ --------------- ಕಲರವಕೆ ಮತ್ತೇರಿದೆ.

ಅಥವಾ

ಯುಗದ ಹಿಂದಿನ --------------- ತುಂಬ ಸವಿಚೈತ್ರವು

X ಕೆಳಗಿನ ಪ್ರಶ್ನೆಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧*೪=೪

೩೫. ಸಿದ್ಧಾರ್ಥನು ಬುದ್ಧನಾದ ಪರಿ ಹೇಗೆ ?

ಅಥವಾ

ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕವಿಗೆ ಹೇಗೆ ಕಂಡು ಬಂದಿತು ?

XI ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ. ೨+೨=೪

೩೬. ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ. ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳುಮಾಡುತ್ತಿದ್ದಾನೆ. ಇದಕ್ಕೆ ಪ್ರತಿಯಾಗಿ ಪ್ರಕೃತಿಯು ನೆರೆ ಹಾವಳಿ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕ ರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವು ಕಾರಣಗಳಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ. ಪರಿಸರ ದಿನದಿಂದ ದಿನಕ್ಕೆ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು, ಗಾಳಿ, ಆಹಾರ ಸಿಗದೇ ಹೋಗಬಹುದು. ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆಯ ಇಂದಿನ ಅಗತ್ಯವಾಗಿದೆ.

ಅ) ಪರಿಸರ ಸಂರಕ್ಷಣೆ ಇಂದಿನ ಅಗತ್ಯ ಏಕೆ ವಿವರಿಸಿರಿ.

ಆ) ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿರುವುದರಿಂದಾದ ಪರಿಣಾಮವೇನು ವಿವರಿಸಿ.

XII ಕೆಳಗಿನ ಯಾವುದಾದರೊಂದು ವಿಷಯದಲ್ಲಿ ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. ೧*೪=೪

೩೭. * ಕ್ರೀಡೆಗಳ ಮಹತ್ವ ಅಥವಾ * ಬಾಲ್ಯ ವಿವಾಹ ಒಂದು ಸಾಮಾಜಿಕ ಪಿಡುಗು.

XIII ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. ೧*೫=೫

೩೮. ನಿಮ್ಮನ್ನು ಮೈಸೂರಿನ ಕುವೆಂಪು ನಗರದ ಸರಕಾರಿ ಪ್ರೌಢ ಶಾಲೆಯ ಅನಿಕೇತ ಎಂದು ಭಾವಿಸಿಕೊಂಡು ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹಣ ಕಳುಹಿಸುವಂತೆ ತಂದೆಗೆ ಪತ್ರ ಬರೆಯಿರಿ.

ಅಥವಾ ನಿಮ್ಮನ್ನು ಕಲಬುರಗಿಯ ಸರಕಾರಿ ಪ್ರೌಢ ಶಾಲೆಯ ತನ್ಮಯಿ ಎಂದು ಭಾವಿಸಿಕೊಂಡು ಆರೋಗ್ಯ ತಪಾಸಣೆಗಾಗಿ ಎರಡು ದಿನಗಳ ರಜೆ ಕೊಡುವಂತೆ ವಿನಂತಿಸಿ ಮುಖ್ಯೋಪಾಧ್ಯಾಯರಿಗೊಂದು ಮನವಿ ಪತ್ರ ಬರೆಯಿರಿ.